‘ಓ... ಯಾಕೆ?... ತಪ್ಪಲ್ವಾ?... ಅಲ್ಲಾ ಮೋಸ ಇದು... ನೀವು...’ ಹೀಗೆ ಏನೇನೋ ಮಾಡಿ ಮೌನ ಮುರಿಯಲು ಪರದಾಡುತ್ತಿದ್ದ ಕರುಣಾ ಕಣ್ಣಿಂದ ಹನಿಯೊಂದು ಟಣ್ ಎಂದು ಕಾಫಿ ಕಪ್‌ಗೆ ಬಿದ್ದಿದ್ದೇ ಗಪ್ಪಾಗಿಬಿಟ್ಟಳು. ಒಂದರ್ಧ ನಿಮಿಷದ ಆ ಮೌನ ಇಬ್ಬರಿಗೂ ಭೀಕರ ಎನಿಸಿತು. ನಂತರ ಕರುಣಾಳೆ ‘ಸೋ...’ ಎಂದು ಟೇಬಲ್ ಮೇಲೆ ಕೈಯೂರಿ ಎದ್ದು ನಿಂತಳು. ‘ನೈಸ್ ಟು ಮೀಟ್ ಯೂ’ ಇಬ್ಬರಿಗೂ ಮತ್ತೆ ಕೈ ಕುಲುಕಬೇಕು ಅನಿಸಲಿಲ್ಲ. ಅವಳು ಹಾಗೆ ನಡೆದು ಹೊರಟಳು. ಸದಾನೂ ಎದ್ದು ಬಿಲ್ಲು ಕೊಡಲೆಂದು ಪರ್ಸಿಗೆ ಕೈ ಹಾಕಿದ್ದೇ ಎಟಿಎಂನಿಂದ ದುಡ್ಡು ತೆಗೆಯಲು ಮರೆತಿದ್ದು ನೆನಪಾಯಿತು. ಕಾರ್ಡ್ ಕೂಡ ಬಿಟ್ಟು ಬಂದಿದ್ದ. ನೂರೈವತ್ತರ ಬಿಲ್ಲು ಟೇಬಲ್ ಮೇಲೆ ಅವನನ್ನು ಅಣಕಿಸುತ್ತಿತ್ತು. ತೆಗೆದ ಪರ್ಸಿನೊಳಗೆ ಒಂದೇ ಹತ್ತರ ನೋಟು ಮೈಮಡಚಿಕೊಂಡು ಕೂತಿತ್ತು. ಥಟ್ಟನೇ ಕತ್ತೆತ್ತಿ ನೋಡಿದ. ಕರುಣಾ ಇನ್ನೂ ರಸ್ತೆಗಿಳಿಯುತ್ತಿದ್ದಳು. ‘ಎಕ್ಸ್‌ಕ್ಯೂಸ್ ಮೀ... ಕರುಣಾ...’ ಸ್ವಲ್ಪ ಜೋರಾಗಿಯೇ ಕೂಗಿದ. ತಿರುಗಿ ನೋಡಿದವಳನ್ನು ಕೈ ಮಾಡಿ ಕರೆದ. ಬಂದು ನಿಂತವಳಿಗೆ ಪೆಚ್ಚು ನಗೆ ನಕ್ಕು ಬಿಲ್ಲು ಮತ್ತು ತನ್ನ ಖಾಲಿ ಪರ್ಸು ಎರಡನ್ನೂ ತೋರಿಸಿದ. ಅವಳಿಗೆಲ್ಲ ಅರ್ಥವಾಗಿ ಖೊಕ್ಕನೆ ನಕ್ಕು ‘ಓ ಸಾರಿ...’ ಎಂದು ನೂರರ ಎರಡು ನೋಟು ತೆಗೆದು ಬಿಲ್ಲಿನ ಮೇಲಿಟ್ಟಳು. ಸದಾನೂ ಅವಳ ಜತೆಗೆ ನಕ್ಕುಬಿಟ್ಟ. ಈಗ ‘ಓಕೆ... ಬಾಯ್...’ ಕೈ ನೀಡಿದಳು. ಒಂದು ಹೆಜ್ಜೆ ಮುಂದಿಟ್ಟು ಕೈ ಕುಲುಕಿದ. ಮತ್ತೆ ತಿರುಗಿ ಹೊರಟವಳು ತೊಟ್ಟಿದ್ದ ಕೆಂಪು ಲೆಗಿನ್ಸ್ ನೋಡುತ್ತಲೇ ಸದಾ ತಾನೂ ರಸ್ತೆಗಿಳಿದ.

ಇದ್ದ ಹತ್ತು ರೂಪಾಯಿಯಲ್ಲಿ ಹುರಿದ ಶೇಂಗಾ ಕೊಂಡ. ಆ ಶೇಂಗಾದವನ ಮುಖ ನೋಡಿ ಯಾಕೋ ವಿಪಿನ್ ನೆನಪಾದ. ಮತ್ತೆ ಶ್ರಾವಂತಿಯ ಹೊಟ್ಟೆ ಮಡಿಕೆ, ಅರ್ಧಮರ್ದ ಮೊಬೈಲ್ ನಂಬರುಗಳು ನೆನಪಾದವು. ಆಫೀಸಿನಲ್ಲಿ ಮೂಗಿನ ಮೇಲೆ ಜಾರುತ್ತಿರುವ ಕನ್ನಡಕವನ್ನು ಏರಿಸಿಕೊಳ್ಳುತ್ತಾ ಕೆಲಸ ಮಾಡುತ್ತಿರಬಹುದಾದ ಅಚ್ಯುತ ನೆನಪಾದ. ನೀಟಾಗಿ ಇನ್ ಮಾಡಿದ್ದ ಷರ್ಟ ಅನ್ನು ಹೊರಗೆಳೆದುಕೊಂಡು, ತುಂಬು ತೋಳಿನ ಗುಂಡಿ ಬಿಚ್ಚಿದ. ಮೈಯಲ್ಲೆಲ್ಲ ಹೊಸ ಗಾಳಿ ಸುಳಿದಂತಾಗಿ ವಿಚಿತ್ರ ಹುರುಪು ಹುಟ್ಟಿತು. ಒಂದಿಷ್ಟು ಶೇಂಗಾ ಬಾಯಿಗೆಸೆದುಕೊಂಡು ಮೊಬೈಲ್ ಎತ್ತಿಕೊಂಡು ಶ್ರಾವಂತಿಯ ನೆನಪಿದ್ದಷ್ಟು ನಂಬರುಗಳ ಮುಂದೆ ಮನಸ್ಸಿಗೆ ಬಂದ ನಂಬರುಗಳನ್ನು ಸೇರಿಸಿ ಡಯಲ್ ಮಾಡತೊಡಗಿದ. ಒಂದೊಂದು ನಂಬರ್ ತಪ್ಪಾದಾಗಲೂ ಅವನ ಉಮೇದು ಹೆಚ್ಚುತ್ತಲೇ ಹೋಗುತ್ತಿತ್ತು.

9483265182 ಟೊಯ್... ಟೊಯ್... ಟೊಯ್...

9483265965 ‘ನೀವು ಕರೆಮಾಡಿದ ಚಂದಾದಾರರು...’

9483265008 ‘ಹಲೋ...’ ‘ಶ್ರಾವಂತಿನಾ?...’ ಯಾವ ವಂತಿನೂ ಅಲ್ಲಾರಿ... ರಾಂಗ್ ನಂಬರ್...’

## ಪದ್ಮನಾಭ ಭಟ್, ಶೇವ್ಕಾರ

ಉತ್ತರಕನ್ನಡ ಜಿಲ್ಲೆಯ ಯಲ್ಲಾಪುರದ ಪದ್ಮನಾಭ ಪ್ರಸ್ತುತ ಬೆಂಗಳೂರಿನಲ್ಲಿ ಪತ್ರಕರ್ತರಾಗಿ ಕೆಲಸ ಮಾಡುತ್ತಿದ್ದಾರೆ. ಇತ್ತೀಚೆಗೆ ಅವರ ‘ಕೇಪಿನ ಡಬ್ಬಿ’ ಎಂಬ ಕಥಾಸಂಕಲನ ಪ್ರಕಟವಾಗಿದೆ.